**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 5002/2025**

**ಸಿ.ಡಬ್ಲ್ಯೂಃ–20** **ಪಿ.ಡಬ್ಲ್ಯೂಃ–12**

**ದಿಃ 04.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ನಸರುದ್ದಿನ ಗೌಸ ಸನದಿ |
| ವಯಸ್ಸು | : | 34 ವರ್ಷ. |
| ಉದ್ಯೋಗ | : | ಪ್ಲಂಬರ್ ಕೆಲಸ |
| ವಾಸಸ್ಥಳ | : | ನಿಪ್ಪಾಣಿ. |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ.1 ಹಾಗೂ ಮೃತ ಅಶ್ರಫಅಲಿ ಗೊತ್ತು. ನ್ಯಾಯಾಲಯದ ಮುಂದೆ ವಿ.ಸಿ. ಮುಖಾಂತರ ಹಾಗೂ ಪ್ರತ್ಯಕ್ಷವಾಗಿ ಹಾಜರಿರುವ ಆರೋಪಿತರನ್ನು ಈ ಮೊದಲು ನೋಡಿಲ್ಲ.

2) ಅಶ್ರಫಅಲಿ ಈಗ್ಗೆ ಒಂದೂವರೆ ವರ್ಷದ ಹಿಂದೆ ನಿಪ್ಪಾಣಿಯ ಭೀಮ ನಗರದಲ್ಲಿ ಯಾರೋ ಕೊಲೆ ಮಾಡಿದ್ದರಿಂದ ಮೃತಪಟ್ಟಿದ್ದಾನೆ. ಆತನ ಸಾವಿಗೆ ಯಾರು ಕಾರಣ ಅಂತಾ ಗೊತ್ತಿಲ್ಲ. ಆರೋಪಿತರು ಆತನನ್ನು ಕೊಲೆ ಮಾಡಿಲ್ಲ. ಆರೋಪಿತರ ಹಾಗೂ ಅವರ ಮಧ್ಯೆ ಹಳೆಯ ದ್ವೇಷ ಯಾವುದು ಇರಲಿಲ್ಲ. ಆರೋಪಿತರು ಅವರ ಮೇಲೆ ಯಾವುದೇ ಕಾಲಕ್ಕೂ ವೈರತ್ವ

ಸಾಧಿಸುತ್ತಿರಲಿಲ್ಲ.

3) ಒಂದೂವರೆ ವರ್ಷದ ಹಿಂದೆ ರಾತ್ರಿ 08.30 ಗಂಟೆ ಸುಮಾರಿಗೆ ಅಶ್ರಫಅಲಿಗೆ ಭೀಮ ನಗರದಲ್ಲಿ ಯಾರೋ ಹೊಡೆದಿದ್ದಾರೆ ಅಂತಾ ಗೊತ್ತಾಗಿ ಹೋಗಿ ನೋಡಿದಾಗ ಆತನ ತಲೆಗೆ, ಮೈಕೈ ಮೇಲೆ ಗಾಯಗಳಾಗಿದ್ದವು. ಆತ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ನಂತರ ಆತನನ್ನು ನಿಪ್ಪಾಣಿ ಸರ್ಕಾರಿ ಆಸ್ಪತ್ರೆಗೆ, ಹೆಚ್ಚಿನ ಚಿಕಿತ್ಸೆಗೆ ಕೊಲಾಪೂರ C. P. R. ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆವು. ರಾತ್ರಿ 10.30 ಗಂಟೆ ಸುಮಾರಿಗೆ ಚಿಕಿತ್ಸೆ ಫಲಿಸದೇ ಅಶ್ರಫಅಲಿ ಮೃತಪಟ್ಟ. ಆ ಕುರಿತು ಚಾ.ಸಾ.1 ದೂರು ಕೊಟ್ಟ ಬಗ್ಗೆ ಗೊತ್ತಿಲ್ಲ. ಆ ಕುರಿತು ಯಾವುದೇ ಹೇಳಿಕೆಗಳನ್ನು ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ– ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ಚಾ.ಸಾ.22 ಆಯಾನ ಎಕ್ಸಂಬಿ ಚಾ.ಸಾ.1 ಹಾಗೂ ಆಶ್ರಫಅಲಿಯ ಗೆಳೆಯ ಎಂದರೆ ಸರಿಯಲ್ಲ. ದಿನಾಂಕಃ 02.10.2024 ರಂದು ಚಾ.ಸಾ.22 ರವರ ಜನ್ಮ ದಿನ ಇತ್ತು ಎಂದರೆ ಸರಿಯಲ್ಲ. ಆ ದಿನ ಚಾ.ಸಾ.1, ಅಶ್ರಫಅಲಿ ಹಾಗೂ ಅವರ ಗೆಳೆಯರಾದ ಚಾ.ಸಾ.12 ರಿಂದ 16 ರವರು ಕೂಡಿಕೊಂಡು ನಿಪ್ಪಾಣಿಯ ಭೀಮ ನಗರದಲ್ಲಿರುವ ಮುನಸಿಪಲ್ ಶಾಲೆಯ ಹಿಂದಿನ

ಬದಿಯಲ್ಲಿರುವ ಜಲಕುಂಭದ ಕಟ್ಟೆಯ ಮೇಲೆ ಕೇಕ್ ಕತ್ತರಿಸುವ ಕಾರ್ಯಕ್ರಮ ಇಟ್ಟುಕೊಂಡು ಅಲ್ಲಿ ಸೇರಿದ್ದರು ಎಂದರೆ ಸರಿಯಲ್ಲ. ಅಲ್ಲಿಗೆ ಆಯಾನ್ ಇನ್ನೂ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆಗ ಆರೋಪಿತರೆಲ್ಲ ತಮ್ಮ ಕೈಯಲ್ಲಿ ಮು.ಮಾ.1 ರಿಂದ 5 ವಸ್ತುಗಳಾದ ಮಚ್ಚು, ತಲವಾರಗಳು, ಗುಪ್ತಿ ಆಯುಧವನ್ನು ಹಿಡಿದುಕೊಂಡು ಚಾ.ಸಾ.1 ಹಾಗೂ ಅಶ್ರಫಅಲಿ ಮೇಲೆ ಹಲ್ಲೆ ಮಾಡಲು ಬಂದರು ಎಂದರೆ ಸರಿಯಲ್ಲ. ಆಗ ಅವರೆಲ್ಲ ಓಡಿ ಹೋದರು ಎಂದರೆ ಸರಿಯಲ್ಲ. ಅಶ್ರಪಅಲಿಗೆ ಈ ಮುಂಚೆ ಕಾಲಿಗೆ ಪೆಟ್ಟಾಗಿದ್ದರಿಂದ ಓಡಲಾಗದೇ ಆರೋಪಿತರ ಕೈಯಲ್ಲಿ ಸಿಕ್ಕಿಹಾಕಿಕೊಂಡ ಎಂದರೆ ಸರಿಯಲ್ಲ. ಆಗ ಆರೋಪಿತರೆಲ್ಲ ಸೇರಿ ಅವರಿಗೆ ಮನಸ್ಸಿಗೆ ಬಂದಂತೆ ಸದರಿ ಆಯುಧಗಳಿಂದ ಆತನ ತಲೆ, ಬೆನ್ನು ಹಾಗೂ ಮೈಕೈ ಮೇಲೆಲ್ಲಾ ಹೊಡೆದು ಗಂಭೀರ ಸ್ವರೂಪದ ಗಾಯ ಪಡಿಸಿದರು ಎಂದರೆ ಸರಿಯಲ್ಲ. ಆಗ ರಾತ್ರಿ 08.20 ಗಂಟೆಯಾಗಿತ್ತು ಹಾಗೂ ಪುರಸಭೆಯ ಲೈಟ ಬೆಳಕು ಇತ್ತು ಎಂದರೆ ಸರಿಯಲ್ಲ. ನಂತರ ಆರೋಪಿತರೆಲ್ಲ ಮೋಟಾರಸೈಕಲಗಳನ್ನು ತೆಗೆದುಕೊಂಡು ಓಡಿ ಹೋದರು ಎಂದರೆ ಸರಿಯಲ್ಲ. ಅವರ ಕೈಗಳಲ್ಲಿದ್ದ ಆಯುಧಗಳನ್ನು ತೆಗೆದುಕೊಂಡು ಹೋದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಮು.ಮಾ.6 ಕೊಡಲಿ ಗುನ್ನಾ ಸ್ಥಳದಲ್ಲಿ ಬಿದ್ದಿತ್ತು ಎಂದರೆ ಸರಿಯಲ್ಲ. ನಂತರ ಚಾ.ಸಾ.1 ರವರು ಚಾ.ಸಾ.17 ರವರಿಗೆ ಪೋನ ಮಾಡಿ ವಿಷಯ ತಿಳಿಸಿದ್ದರಿಂದ ನಾನು ಆತನ ಸಂಗಡ ಸ್ಥಳಕ್ಕೆ ಹೋದೆ ಎಂದರೆ ಸರಿಯಲ್ಲ. ನಾನು, ಚಾ.ಸಾ.17 ಹಾಗೂ ನನ್ನ ಸಂಬಂಧಿಕರ ಸಹಾಯದಿಂದ ಅಶ್ರಫಅಲಿಯನ್ನು ನಿಪ್ಪಾಣಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಉಪಚಾರಕ್ಕೆ ಕೊಲಾಪೂರದ ಸಿ. ಪಿ. ಆರ್. ಆಸ್ಪತ್ರೆಗೆ ದಾಖಲಿಸಿದೆವು ಎಂದರೆ ಸರಿಯಲ್ಲ. ಅಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಆಶ್ರಫಅಲಿ ಸತ್ತ ಎಂದರೆ ಸರಿಯಲ್ಲ. ಆ

ಕುರಿತು ಚಾ.ಸಾ.1 ಆರೋಪಿತರ ವಿರುದ್ದ ದೂರು ಕೊಟ್ಟ ಎಂದರೆ ಸರಿಯಲ್ಲ. ಅದಾದ ನಂತರ ದಿನಾಂಕಃ 04.10.2024 ರಂದು ಠಾಣೆಗೆ ಹೋಗಿ ಘಟನೆ ಹಿನ್ನೆಲೆ ಕುರಿತು 3ನೇ ಅರೋಪಿಯಾದ ರವಿ ಶಿರಗಾಂವಿ ಅಶ್ರಫಅಲಿಗೆ ನಿಪ್ಪಾಣಿಯ ಕೋಟಿವಾಲೆ ಕೂಟದಲ್ಲಿ ದುರ್ಗುಟ್ಟಿ ನೋಡಿದ್ದರಿಂದ ಅವರ ಮದ್ಯೆ ಜಗಳವಾಗಿತ್ತು ಎಂದರೆ ಸರಿಯಲ್ಲ. ಒಬ್ಬ ಅಭಿಷೇಕ ದತ್ತವಾಡೆಯವರನ್ನು ಚಾ.ಸಾ.1 ಹಾಗೂ ಅಶ್ರಪಅಲಿ ಕೂಡಿ ಕೊಲೆ ಮಾಡಿದ್ದರಿಂದ ಆರೋಪಿತರು ಅವರ ಮೇಲೆ ಸಿಟ್ಟಾಗಿದ್ದರು ಎಂಬುದಾಗಿ, ಹಾಗೂ ಅಶ್ರಫಅಲಿ ಚಿಕಿತ್ಸೆ ಫಲಕಾರಿಯಾಗದೇ ಸಿ. ಪಿ. ಆರ್. ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಗಿ ನನಗೀಗ ವಿವರವಾಗಿ ಓದಿ ಹೇಳಲಾದ "ನಾನು ................ ಸರಿ ಇರುತ್ತದೆ" ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.45 ಎಂದು ಗುರುತಿಸಲಾಯಿತು.

2) ದಿನಾಂಕಃ 09.10.2024 ರಂದು ನಾನು ಮತ್ತೇ ಠಾಣೆಗೆ ಹಾಜರಾಗಿ 12, 13ನೇ ಆರೋಪಿತರು ಆಶ್ರಫಅಲಿಯ ಚಲನ ವಲನ ಕುರಿತು ಉಳಿದ ಆರೋಪಿತರಿಗೆ ಮಾಹಿತಿ ಕೊಟ್ಟು ಗುನ್ನೆಯಲ್ಲಿ ಭಾಗಿಯಾಗಿದ್ದಾರೆಂದು ನನಗೀಗ ವಿವರವಾಗಿ ಓದಿ ಹೇಳಲಾದ "ಈಗ ತಾವು ................ ಈಗ ತಿಳಿಯಿತು" ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.46 ಎಂದು ಗುರುತಿಸಲಾಯಿತು.

3) ಸದರಿ ಎಲ್ಲ ವಿಚಾರ ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ– ಆರೋಪಿತರ ಪರ:– ಏನೂ ಇಲ್ಲ.**

**ಮರು ವಿಚಾರಣೆ** : ಇರುವುದಿಲ್ಲ.

(ಈ ಸಾಕ್ಷಿಯ ಸಾಕ್ಷ್ಯದ ಸಮಯದಲ್ಲಿ 1 ರಿಂದ 5, 7, 8 ನೇ ಆರೋಪಿತರನ್ನು ಕಾರಾಗೃಹದಿಂದ ವಿ.ಸಿ. ಮೂಲಕ ಹಾಜರಪಡಿಸಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.